## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ.ನಂಃ 10007 / 2023**

**ಚಾಸಾ ಃ 08**
**ಪ್ರಾಸಾ ಃ 16**

| | | |
|---|---|---|
| **ಹೆಸರು** | ಃ | ವೆಂಕಟೇಶ್ |
| **ತಂದೆ ಹೆಸರು** | ಃ | ಗೋಪಾಲಪ್ಪ |
| **ವಯಸ್ಸು** | ಃ | 34 ವರ್ಷ |
| **ವೃತ್ತಿ** | ಃ | ಖಾಸಗಿ ಕಂಪನಿಯಲ್ಲಿ ಕೆಲಸ, |
| **ವಾಸ** | ಃ | ಅದ್ದೆವಿಶ್ವನಾಥಪುರ, ರಾಜಾನುಕುಂಟೆ. |

**ಈ ದಿನ ದಿನಾಂಕಃ 04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

ದಿನಾಂಕ 20.01.2023 ರಂದು ನಾನು ರಾಜಾನುಕುಂಟೆಯಲ್ಲಿ ಇದ್ದ ಸುವಯದಲ್ಲಿ ರಾಜಾನುಕುಂಟೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ಆಗ ನಾನು ಠಾಣೆ ಹೋಗಿರುತ್ತೇನೆ. ಠಾಣೆಗೆ ಹೋದಾಗ ಮಧ್ಯಾಹ್ನ ಸುಮಾರು 2-00 ಗಂಟೆಯಾಗಿತ್ತು. ಆಗ ಠಾಣೆಯಲ್ಲಿ ಇನ್ಸ್ಪೆಕ್ಟರ್ ಭರತ್ ಮತ್ತು ಆರೋಪಿ ಇದ್ದರು. ಆ ಕಾಲಕ್ಕೆ ಇನ್ನೊಬ್ಬ ವೆಂಕಟೇಶ್ ಎಂಬುವವರೂ ಸಹ ಇದ್ದರು. ಆ ದಿನ ಠಾಣೆಯಲ್ಲಿದ್ದ ವ್ಯಕ್ತಿಯನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಸದರಿ ಆರೋಪಿಯನ್ನು ವಿ ಸಿ ಮೂಲಕ ಹಾಜರುಪಡಿಸಿದ್ದು, ಸಾಕ್ಷಿದಾರರು ಆರೋಪಿಯನ್ನು ವಿ ಸಿ ಮೂಲಕ ನೋಡಿ ಗುರುತಿಸಿರುತ್ತಾರೆ. ಠಾಣೆಗೆ ಹೋದಾಗ ಶಾನುಭೋಗನಹಳ್ಳಿಯ ಲೇಔಟ್‌ನಲ್ಲಿ ಕೊಲೆಯಾಗಿರುತ್ತದೆ, ಅಲ್ಲಿಗೆ ಪಂಚನಾಮೆಗೆ ಹೋಗಬೇಕೆಂದು ತಿಳಿಸಿರುತ್ತಾರೆ.

**2.** ಸ್ಟೇಷನ್‌ನಿಂದ ಜಿಪಿನಲ್ಲಿ ನನ್ನನ್ನು, ಇನ್ನೊಬ್ಬ ವೆಂಕಟೇಶ್‌ನನ್ನು, ಆರೋಪಿಯನ್ನು ಮತ್ತು ಪೊಲೀಸರನ್ನು ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು ಆರೋಪಿತರು ತೋರಿಸಿದಂತೆ ಶಾನುಭೋಗನಹಳ್ಳಿಯ ಲೇಔಟ್‌ಗೆ ಹೋಗಿರುತ್ತೇವೆ. ಅಲ್ಲಿ ಆರೋಪಿಯು ಸದರಿ ಸ್ಥಳವನ್ನು ತೋರಿಸಿ ಇದೇ ಸ್ಥಳದಲ್ಲಿ ಚಾಕುವಿನಿಂದ ಚುಚ್ಚಿರುತ್ತೇನೆಂದು ತಿಳಿಸಿದ್ದು, ಅಲ್ಲಿ ಪೋಟೋ ತೆಗೆದುಕೊಂಡಿರುತ್ತಾರೆ. ನಂತರ ಅಲ್ಲೇ ಪಕ್ಕದಲ್ಲಿ ಬಿದ್ದಿದ್ದ ಚಾಕುವಿನ ಕವರ್ ನ್ನು ಆರೋಪಿಯು ಎತ್ತಿ ಇನ್ಸ್‌ಪೆಕ್ಟರ್ ಭರತ್ ರವರಿಗೆ ಕೊಟ್ಟಿರುತ್ತಾನೆ. ನಂತರ ಅಲ್ಲಿಯೂ ಸಹ ಪೋಟೋಗಳನ್ನು ತೆಗೆದಿರುತ್ತಾರೆ. ಸ್ಥಳದಲ್ಲಿ ಘಟನೆಯ ಬಗ್ಗೆ ಮಹಜರ್ ಬರೆದು ಅದರಲ್ಲಿ ಬರೆದ ವಿಚಾರವನ್ನು ನಮಗೆ ಓದಿ ಹೇಳಿ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಮಹಾಜರ್ ನ್ನು ಈಗ ನೋಡುತ್ತಿದ್ದನು ಅದನ್ನು ನಿಪಿ-34 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಕೊಲೆ ಮಾಡಿದ ಸ್ಥಳದಲ್ಲಿ ತೆಗೆದ ಪೊಟೋವನ್ನು ನೋಡಿ ಗುರುತಿಸುತ್ತೇನೆ. ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ನಿಪಿ-35 ಎಂದು ಗುರುತಿಸಲಾಯಿತು. ಅದೇ ರೀತಿ ಚಾಕುವಿನ ಕವರ್ ಬಿದ್ದ ಸ್ಥಳದಲ್ಲಿ ಸದರಿಯಲ್ಲಿ ತೆಗೆದ ಪೋಟೊಗಳನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-36 ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ನಾವು ಮಧ್ಯಾಹ್ನ 3-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ ಇದ್ದೇವು. ಚಾಕುವಿನ ಕವರ್ ನೋಡಿದರೆ ಗುರುತಿಸುತ್ತೇನೆ. ಅದನ್ನು ಬಿಳಿ ಬಟ್ಟೆ ಚೀಲದಲ್ಲಿ ಪ್ಯಾಕ್ ಮಾಡಿ ಸುತ್ತಿ ಮೊಹರು ಮಾಡಿದ್ದರಿಂದ ಸಾಕ್ಷಿದಾರರಿಂದ ನೋಡಿ ಗುರುತಿಸಲು ತೆರೆಯಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ನಂತರ ಸಾಕ್ಷಿದಾರರು ಸದರಿ ಕವರ್ ರನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು 27 ಮತ್ತು 28 ಎಂದು ಗುರುತಿಸಲಾಯಿತು. ಅವುಗಳನ್ನು ಪ್ಯಾಕ್ ಮಾಡಿದ ಬಟ್ಟೆಯ ಮೇಲೆ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ಅದರಲ್ಲಿರುವ ನನ್ನ ಸಹಿಗಳನ್ನು ನೋಡಿ ಗುರುತಿಸುತ್ತೇನೆ.

3. ಆರೋಪಿ ಚಾಕು ಖರೀದಿಸಿದ ಸಿಂಗನಾಯಕನಹಳ್ಳಿಯಲ್ಲಿರುವ ಬಿಗ್ ಬಜಾರ್ ಗೆ ಆರೋಪಿ ನಮ್ಮನ್ನು ಕರೆದುಕೊಂಡು ಒಳಗೆ ಹೋಗಿ ತೋರಿಸಿ ಇಲ್ಲಿಯೇ ಚಾಕು ಖರೀದಿ ಮಾಡಿರುತ್ತೇನೆಂದು ಸದರಿ ಚಾಕುವನ್ನು ತೆಗದುಕೊಂಡ ಜಾಗವನ್ನು ತೋರಿಸಿರುತ್ತಾನೆ. ಸದರಿ ಜಾಗದಲ್ಲಿ ಪೊಲೀಸರು ಪರಿಶೀಲಿಸಿ ಮಹಾಜರ್ ಬರೆದು ಪೋಟೋ ತೆಗೆದುಕೊಂಡಿರುತ್ತಾರೆ. ಸದರಿ ಮಹಾಜರ್ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-37 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-37(ಎ) ಎಂದು ಗುರುತಿಸಲಾಯಿತು. ಅಲ್ಲೆ ತೆಗೆದ ಪೋಟೋಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-38 ಮತ್ತು ನಿಪಿ-39 ಎಂದು ಗುರುತಿಸಲಾಯಿತು. ಅಲ್ಲಿಗೆ ಹೋದಾಗ ಸಮಯ ಸಂಜೆ 6-00 ಗಂಟೆಯಾಗಿತ್ತು. ಸದರಿ ಮಹಜರ್ ರಗೆ ನಾನು ಮತ್ತು ಮತ್ತೊಬ್ಬ ವೆಂಕಟೇಶನು ಸಹಿ ಮಾಡಿರುತ್ತೇವೆ. ಈಗ ನೋಡುತ್ತಿರುವ ದಾಖಲೆಗೆ ನಾನು ಪೊಲೀಸ್ ಠಾಣೆಗೆ ಹೋದಾಗ ಮಹಜರ್ ಗೆ ಹೋಗಬೇಕೆಂದು ಹೇಳಿ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನೋಡುತ್ತಿದ್ದು ಅದನ್ನು ನಿಪಿ-40 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-40 (ಎ) ಎಂದು ಗುರುತಿಸಲಾಯಿತು.

( **ಪಾಟೀ ಸವಾಲು - ಆರೋಪಿ ಪರ ವಕೀಲರನ್ನು ಕರೆಸಲಾಯಿತು ಗೈರುಹಾಜರಿರುತ್ತಾರೆ. ಯಾರು ಪ್ರತಿನಿಧಿಸಿರುವುದಿಲ್ಲ. ಆರೋಪಿಯಲ್ಲಿ ವಕೀಲರ ಬಗ್ಗೆ ವಿಚಾರಿಸಿದಾಗ ಪ್ರತಿ ಮುದ್ದಂತಿನಂದು ವಕೀಲರು ಬರುತ್ತಾರೆಂದು ತಿಳಿಸಿರುತ್ತಾರೆಯೇ ವಿನಃ ವಕೀಲರು ಹಾಜರಾಗಿ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಆರೋಪಿ ಪರವಾಗಿ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಗಿರುತ್ತದೆ.)**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ.